ಸಾಲವೆಂದೂ ಎರಡನೆಯದನ್ನು ನಕಾರಾತ್ಮಕ ಸಾಲವೆಂದೂ ನಾವು ಹೆಸರಿಸಬಹುದು. ಸಕಾರಾತ್ಮಕ ಸಾಲಗಾರನಿಗೆ ಒಂದು ನಿರ್ದಿಷ್ಟ ಗುರಿಯಿರುತ್ತದೆ. ಬದುಕಿನಲ್ಲಿ ಏಳ್ಗೆ ಹೊಂದಬೇಕೆಂಬ ತುಡಿತ ಇರುತ್ತದೆ. ವ್ಯಕ್ತಿಗತ ಚಟಗಳನ್ನೊ ಇಲ್ಲವೆ ದುರಾಸೆಗಳನ್ನು ಪೂರೈಸಿಕೊಳ್ಳುವುದಕ್ಕಾಗಿ ಮಾಡುವ ಸಾಲ ಗೊತ್ತು ಗುರಿಯಿಲ್ಲದೆ ಸಾಗಿ ನಕಾರಾತ್ಮಕವಾಗಿ ಕೊನೆಗೊಳ್ಳುತ್ತದೆ. ಹಾಗಾಗಿ, ಈ ಬಗೆಯ ಸಾಲಗಾರರನ್ನು ಪಲಾಯನವಾದಿ ಸಾಲಗಾರರು ಎಂದು ಹೆಸರಿಸುವುದೇ ಸರಿಯೆಂದು ನನ್ನ ಅಭಿಪ್ರಾಯ. ಈ ಪಲಾಯನವಾದಿ ಸಾಲಗಾರರ ಬಗ್ಗೆ ಪತ್ರಿಕೆಗಳಲ್ಲಿ, ದೂರದರ್ಶನಗಳಲ್ಲಿ ಆಗಾಗ್ಗೆ ಸುದ್ದಿ ಸಮಾಚಾರಗಳು ಬರುತ್ತಲೇ ಇರುತ್ತವಲ್ಲ? ಅವನ್ನ ನಾನೂ ನೀವು ಓದಿಯೇ ಇರುತ್ತೇವೆ.

ಸಾಲ ಮಾಡುವುದು ಮತ್ತು ತೀರಿಸಲಾರದೆ ಒದ್ದಾಡುವುದು ಮತ್ತು ಓಡಿಹೋಗುವುದು ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿರುವುದೇ ಆಗಿದೆ. ಈ ಕುರಿತು ಪುರಾಣೇತಿಹಾಸಗಳಲ್ಲಿ ದಾಖಲಾಗಿರುವ ಮೊಟ್ಟಮೊದಲ ಸಾಲಗಾರ ಸತ್ಯಹರಿಶ್ಚಂದ್ರನ ಕಥೆಯನ್ನೇ ನೋಡಬಹುದು. ಕೊಟ್ಟ ಮಾತೊಂದನ್ನು ಉಳಿಸಿಕೊಳ್ಳುವುದಕ್ಕಾಗಿ ರಾಜನಾದ ಹರಿಶ್ಚಂದ್ರನು ಇನ್ನಿಲ್ಲದ ಸಾಲದ ಹೊರೆ ಹೊತ್ತುಕೊಂಡದ್ದು, ಅದನ್ನು ವಸೂಲು ಮಾಡಲು ಸಾಲಿಗನಾದ ವಿಶ್ವಾಮಿತ್ರನಿಂದ ನೇಮಕಗೊಂಡ ನಕ್ಷತ್ರಿಕನ ಉಪಟಳ, ಅದರ ಪರಿಣಾಮ ಮಗ ಲೋಹಿತಾಶ್ವನನ್ನು ಕಳೆದುಕೊಂಡು, ಹೆಂಡತಿ ಚಂದ್ರಮತಿಯನ್ನು ಕಷ್ಟಗಳ ಪರಂಪರೆಗೆ ತಳ್ಳಿ, ತಾನೂ ಇನ್ನಿಲ್ಲದ ಕಷ್ಟಕೋಟಲೆಗಳಿಗೆ ಒಳಗಾಗಿ ದಾರುಣವಾಗಿ ಬದುಕಿದುದು; ಆದರೂ ಕೊಟ್ಟ ಮಾತನ್ನು ಉಳಿಸಿಕೊಳ್ಳುವುದಕ್ಕಾಗಿ ವಿಶ್ವಾಮಿತ್ರನ ಹಣವನ್ನು ಬಡ್ಡಿ ಸಮೇತ ಹಿಂದಿರುಗಿಸಲು ಬದ್ಧನಾದುದು ಎಲ್ಲರಗೂ ತಿಳಿದಿರುವಂಥದೇ. ಸಾಲ ಮಾಡಿದವನು ಅದನ್ನು ಪ್ರಾಮಾಣಿಕವಾಗಿ ಬಡ್ಡಿ ಸಮೇತ ಹಿಂದಿರುಗಿಸಲು ಹೊರಟರೆ ಏನೆಲ್ಲ ಪರಿಪಾಟಲು ಪಡಬೇಕಾಗುತ್ತದೆ ಎಂಬುದಕ್ಕೆ ಈ ಕಥಾನಿದರ್ಶನವೇ ಸಾಕು. ಆದ್ದರಿಂದಲೇ ಕೊಟ್ಟ ಸಾಲವನ್ನು ಹಿಂದಿರುಗಿಸುವಂತೆ ಪದೇಪದೇ ಯಾರಾದರೂ ಪೀಡಿಸುತ್ತಿದ್ದರೆ 'ಏನೊಳ್ಳೆ ನಕ್ಷತ್ರಿಕನ ತರಹ ಆಡ್ತಿಯಲ್ಲ?' ಅಂತ ಜನ ಹೇಳುವುದನ್ನು ಆಗಾಗ ನಾವು ಕೇಳಬಹುದು. ಅಂದರೆ, ಪುರಾಣೇತಿಹಾಸ ಕಾಲದಿಂದಲೂ ನಕ್ಷತ್ರಿಕನು ಜನರ ಮನಸ್ಸಿನಲ್ಲಿ ಚಿರಸ್ಥಾಯಿಯಾಗಿ ಉಳಿದಿದ್ದಾನೆ ಎಂಬುದಕ್ಕೆ ಇನ್ನೇನು ಸಾಕ್ಷಿಬೇಕು? ಪ್ರಾಮಾಣಿಕತೆಯನ್ನು ಬಿಟ್ಟರೆ ಮನುಷ್ಯ ಸುಖವಾಗಿ ಬದುಕಬಹುದು ಎಂಬುದು ಅದರ ಅಂತರಾರ್ಥವೂ ಆಗಿದೆಯಲ್ಲವೆ?

ನಕ್ಷತ್ರಿಕನ ಕಾಟ ಆ ಕಾಲದಲ್ಲಿ ಮಾತ್ರವಲ್ಲ ಈಗಿನ ಕಾಲದಲ್ಲೂ ಇದ್ದೇ ಇದೆ. ಸಾಲ ಮಾಡಿದವರಿಗೆಲ್ಲ ಆಧುನಿಕ ನಕ್ಷತ್ರಿಕರ ಕಾಟದ ಅನುಭವ ಸಾಮಾನ್ಯವಾಗಿ ಆಗೇ ಇರುತ್ತದೆ. ಅದೇ ರೀತಿ ಈಗ್ಗೆ ಹಲವು ವರ್ಷಗಳ ಹಿಂದೆ ಅಂದರೆ ಸ್ವಾತಂತ್ರ್ಯದ ಪೂರ್ವ ಮತ್ತು ಉತ್ತರದ ದಿನಗಳಲ್ಲಿ ಮೈಸೂರು, ಬೆಂಗಳೂರು ಈ ಮುಂತಾದ ಪಟ್ಟಣಗಳಲ್ಲಿ ಸಾಲ ನೀಡಿದವರು ಅದರ ವಸೂಲಿಗಾಗಿ ಪಠಾಣರನ್ನು ನೇಮಿಸಿಕೊಳ್ಳುತ್ತಿದ್ದುದು ಕೆಲವರಿಗಾದರೂ ಗೊತ್ತಿರುವಂಥದೇ. ಚಿಕ್ಕಂದಿನ ದಿನಗಳಲ್ಲಿ ಅಂಥ ಕೆಲವರನ್ನು ನಾನು ಮೈಸೂರು ಮಾರುಕಟ್ಟೆ ಪ್ರದೇಶದಲ್ಲಿ ನೋಡುತ್ತಿದ್ದೆ. ದೊಗಳೆ ಪೈಜಾಮ, ಮಂಡಿಯವರೆಗೂ ಇಳಿಬಿದ್ದ ಶರಟು, ಎತ್ತಿ ಕಟ್ಟಿದ ಪಟಕ (ಪೇಟ), ಹುಲುಸಾಗಿ ಬೆಳೆಸಿದ ಗಡ್ಡ, ಸೊಂಟದಲ್ಲೊಂದು ಬಾಕು, ಕಠಿಣ ಅಥವಾ ಕ್ರೂರ ಮುಖ ಎಂಥವರನ್ನೂ ಮೊದಲ ನೋಟದಲ್ಲೇ ಗಾಬರಿ ಹುಟ್ಟಿಸುತ್ತಿತ್ತು. ಅವರ ಮಾತುಕತೆ ಮತ್ತು ನೋಟಕ್ಕೇ ಹೆದರಿ ಸಾಲಗಾರರು ನಿಗದಿತ ಸಮಯದಲ್ಲಿ ಸಾಲಿಗನಿಗೆ ಬಡ್ಡಿ ಸಮೇತ ಅಸಲನ್ನು ನೀಡುತ್ತಿದ್ದರೆಂದು ನಾನು ಕೇಳಿ ಬಲ್ಲೆ. ಮಕ್ಕಳು ಯಾರಾದರೂ ರಂಪ ಮಾಡಿದರೆ, ಹಟ ಹಿಡಿದರೆ 'ಬಾಯ್ಮುಚ್ಚು, ಇಲ್ಲದಿದ್ರೆ ಪಠಾಣನ್ನ ಕರಿತೀನಿ' ಅಂತ ಹೇಳುತ್ತಿದ್ದ ತಾಯಂದಿರೂ ಇದ್ದರು. ಆ ಮಾತಿಗೆ, ರಾಕ್ಷಸೋಪಾದಿಯ ಪಠಾಣನನ್ನು ನೆನೆಸಿಕೊಂಡೊ ಇಲ್ಲವೆ ಕಲ್ಪಿಸಿಕೊಂಡೊ ಮಕ್ಕಳು ಅಳು ನಿಲ್ಲಿಸುತ್ತಿದ್ದರು ಅಂತ ಕೇಳಿದ್ದೇನೆ.